**ಫ್ರಾಸಾ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕಃ 15-11-2024 ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

3. ದಿಃ 25-05-2018 ರಂದು ಮಧ್ಯಾಹ್ನ 12-00 ಗಂಟೆಗೆ ಮುಂದಿನ ತನಿಖೆಗಾಗಿ ಸಾಮ್ರಾಗ್ರಿಗಳನ್ನು ಜೀಪನಲ್ಲಿ ಇಡಲು ಸತ್ಯನಾರಾಯಣ ಪಿಎಸಐ ಅವರು ಹೇಳಿದರು. ಪೊಲೀಸ ಅಧಿಕಾರಿಗಳು ಒಂದು ಜೀಪನಲ್ಲಿ ಜೀಪ ನಂ. ಕೆಎ-04 ಜಿ-1305 ಸದರಿ ವಾಹನದಲ್ಲಿ ಸಾಮ್ರಾಗ್ರಿಗಳನ್ನು ಇಟ್ಟರು. ಇನ್ನೊಂದು ವಾಹನದ ನಂ. ಕೆಎ-04 ಜಿ-1306 ವಾನದಲ್ಲಿ ನನಗೆ, ಪೊಲೀಸ ಪೇದೆಗಳು, ಪಂಚರಾದ ಹಣಮಂತ ಮತ್ತು ಲಕ್ಷ್ಮಣ ದಾಸರ ಜೀಪ ನಂ. ಕೆಎ-04 ಜಿ-1305 ರಲ್ಲಿ ಡಿವೈಎಸಪಿ, ಸತ್ಯನಾರಾಯಣ ಪಿಎಸಐ, ಹಣಮಂತ ಸಾಕ್ಷಿ ಕುಳಿತು ಮಧ್ಯಾಹ್ನ 12-30 ಗಂಟೆಗೆ ಎಸಿಬಿ ಕಛೇರಿ ಬಿಟ್ಟು ಶಹಾಪೂರ -ಗೋಗಿ ಮಾರ್ಗವಾಗಿ ಮಲ್ಲಾ ಕ್ರಾಸಗೆ ಮಧ್ಯಾಹ್ನ 2-30 ಗಂಟೆಗೆ ತಲುಪಿದೇವು. ನಂತರ ಪಿಎಸಐ ಸತ್ಯನಾರಾಯಣ ರವರು ಆಪಾದಿತನಿಗೆ ಫೋನ್ ಮಾಡಲು ನನಗೆ ತಿಳಿಸಿದರು. ನಾನು ನನ್ನ ಫೋನ್ ನಿಂದ ಆಪಾದಿತನಿಗೆ ಫೋನ್ ಮಾಡಿದೇನು ನಾನು ಎಲ್ಲಿ ಬರಬೇಕು ಎಂದು ಆಪಾದಿತನಿಗೆ ಕೇಳಿದಾಗ ಆಪಾದಿತನು ಅಂಬಿಗ ಚೌಡಯ್ಯ ಚೌಕ ಹತ್ತಿರ ಬರಲು ತಿಳಿಸಿದನು. ಸತ್ಯನಾರಾಯಣ ಪಿಎಸಐ ರವರು ನನಗೆ ಮತ್ತು ನೆರಳು ಸಾಕ್ಷಿ ಲಕ್ಷ್ಮಣ ಅವರಿಗೆ ಅಲ್ಲಿ ಆಪಾದಿತನಿಗೆ ಹಣ ಕೊಡುವಾಗ ನನಗೆ ಸಾಧ್ಯವಾದರೆ ಫೋನ್ ನಲ್ಲಿ ರಿಕಾರ್ಡ ಮಾಡಿಕೊಳ್ಳಲು ಮನವರಿಕೆ ಮಾಡಿದರು. ನನ್ನ ಮೋಟರ ಸೈಕಲನಲ್ಲಿ ನೆರಳು ಸಾಕ್ಷಿ ಲಕ್ಷ್ಮಣ ಇಬ್ಬರು 2-30 ಗಂಟೆಗೆ ಕೆಂಭಾವಿಯ ಅಂಬಿಗರ ಚೌಡಯ್ಯ ಚೌಕ ಹತ್ತಿರ ಸಿಫಾ ಕೋಲ್ ಡ್ರಿಂಕ್ಸ ಮುಂದುಗಡೆ ನಾನು ಕರ್ಚಿಯಲ್ಲಿ ಕುಳಿತುಕೊಂಡಿದ್ದೇನು. ನೆರಳು ಸಾಕ್ಷಿ ಲಕ್ಷ್ಮಣ ದಾಸರ ನನ್ನ ಹಿಂದುಗಡೆ ನಿಂತ್ತಿದ್ದರು. ನನ್ನ ಹಿಂದುಗಡೆ ಪೊಲೀಸ ಅಧಿಕಾರಿಗಳು ಮದಿನ ಪಾನ ಶಾಪ ಹತ್ತಿರ ನಿಂತುಕೊಂಡಿದ್ದರು. ಆ ವೇಳೆಗೆ ಆಪಾದಿತ ನೌಕರ ನಾನು ಕುಳಿತಲ್ಲಿಗೆ ಬಂದಿರುತ್ತಾನೆ ಆಗ ಸಮಯ ಮಧ್ಯಾಹ್ನ 3-00 ಗಂಟೆ ಆಗಿತ್ತು. ನಾನು ಮತ್ತು ಆಪಾದಿತನು ಸಿಫಾ ಕೋಲ್ ಡ್ರಿಂಕ್ಸ ಅಂಗಡಿಯ ಒಳಗಡೆ ಹೋದೆವು. ಅಲ್ಲಿ ಕುಳಿತುಕೊಂಡು ನನ್ನ ಕೇಸಿನ ಬಗ್ಗೆ ಪೈಲ ಬಗ್ಗೆ ವಿಚಾರಿಸಿದೇನು. ಆಗ ಆಪಾದಿತನು ಇನ್ನು ಕುಹಿಸಿಲ್ಲ ನಾನು ಕೇಳಿದ ಹಣ 12,000/- ರೂ ಕೊಟ್ಟರೆ ನಾಳೆ ಅಥವಾ ನಾಡಿದು ಕೊಟ್ಟು ಕಳುಹಿಸುತ್ತೇನೆ ಎಂದು ಹೇಳಿದನು. ಅದಕ್ಕಾಗಿ ನನ್ನ ಜೇಬನಲ್ಲಿರುವ 12,000/- ರೂ. ತೆಗೆದು ಎಣಿಸಿ ಆಪಾದಿತನ ಕೈಯಲ್ಲಿ ಕೊಟ್ಟೆನು. ಆಪಾದಿತನು ಸಹ ಎರಡೂ ಕೈಗಳಿಂದ ಹಣವನ್ನು ಎಣಿಸಿ ತನ್ನ ಪ್ಯಾಂಟನ ಜೇಬಿನಲ್ಲಿ ಇಟ್ಟುಕೊಂಡನು. ನಂತರ ನಾನು ಹೊರಗಡೆ ಬಂದು ನೆರಳು ಸಾಕ್ಷಿ ಲಕ್ಷ್ಮಣನಿಗೆ ಬಲಕೈಯನ್ನು ತೆಗೆದುಕೊಂಡು ಬಲ ಕಪಾಳಕ್ಕೆ ಮುಟ್ಟಿಸುತ್ತಾ ಸೂಚನೆ ಕೊಟ್ಟೆನು. ಆ ವೇಳೆಗೆ ಆಪಾದಿತ ನೌಕರನು ಹೊರಗಡೆ ಬಂದಿರುತ್ತಾನೆ ಹಣವನ್ನು ತೆಗೆದುಕೊಂಡ ಆಪಾದಿತ ಈತನೆ ಎಂದು ಲಕ್ಷ್ಮಣ ಹಾಗೂ ಪೊಲೀಸ ಅಧಿಕಾರಿಗಳಿಗೆ ತಿಳಿಸಿರುತ್ತೇನೆ. ಅಧಿಕಾರಿಗಳು ಆಪಾದಿತನ ನೌಕರನನ್ನು ಹಿಡಿಯಲು ಸುತ್ತು ವರಲು ಹೋದರು. ಆ ವೇಳೆಯಲ್ಲಿ ಆಪಾದಿತನ ನೌಕರನು ತನ್ನ ಸೈಕಲ ಮೋಟರ ಚಾಲು

ಮಾಡುವದನ್ನು ಬಿಟ್ಟು ಬೈಕ ಅಲ್ಲಿ ಬಿಟ್ಟು ಓಡಲು ಪ್ರಾರಂಬಿಸಿದನು. ಆಪಾದಿತ ನೌಕರನಿಗೆ ಅಧಿಕಾರಿಗಳು ಮತ್ತು ನೆರಳು ಸಾಕ್ಷಿ ಲಕ್ಷ್ಮಣ ಹಿಡಿಯಲು ಬೆನ್ನು ಹತ್ತಿ ಹೊದರು. ಆಪಾದಿತನು ಪತ್ಯಾಪೂರ ರಸ್ತೆ ಕಡೆಗೆ ಓಡಿ ಹೋಗಿರುತ್ತಾನೆ. ಆ ವೇಳೆಗೆ ಸಮಯ ಮಧ್ಯಾಹ್ನ 3-15 ಗಂಟೆ ಆಗಿತ್ತು. ಆಪಾದಿತನು ಮುಂದೆ ಎಡವಿ ನೆಲದ ಮೇಲೆ ಕೈಗಳನ್ನು ಊರಿ ಬಿದಿದ್ದನು. ನಾನು ಹಿಂದುಗಡೆ ಹೋಗಿದ್ದೇನು ಆಗ ಆಪಾದಿತ ನೌಕರನು ನಾನು ಕೊಟ್ಟಂತಹ ಹಣವನ್ನು ನೆಲದ ಮೇಲೆ ಒಗೆದು ಮತ್ತು ಮೋಬೈಲ ನಂಬರ ಒಗೆದು ಎಡವಿ ಬಿದ್ದನು. ಪಿಸಿ ಗುತ್ತಪ್ಪಗೌಡ ಅವರು ಆಪಾದಿತ ನೌಕರನ ಒಂದು ಕೈ ಹಿಡಿದರು ಪ್ರಕಾಶ ಮಾಳಿಯವರು ಇನ್ನೊಂದು ಕೈ ಹಿಡಿದರು. ಸತ್ಯನಾರಾಯಣ ಪಿಎಸಐ ರವರು ಆ ಸ್ಥಳಕ್ಕೆ ಬಂದರು. ಪಿಎಸಐ ಅವರಿಗೆ ಹಣ ತೆಗೆದುಕೊಂಡ ಆಪಾದಿತ ಈತನೇ ಎಂದು ನಾನು ಮತ್ತು ನೆರಳು ಸಾಕ್ಷಿ ಲಕ್ಷ್ಮಣ ತಿಳಿಸಿದೆವು. ಸತ್ಯನಾರಾಯಣ ಪಿಎಸಐ ರವರು ತಮ್ಮ ಪರಿಚಯ ಮಾಡಿಸಿದರು ಮತ್ತು ಆಪಾದಿತನಿಗೆ ಹೆಸರು ಕೇಳಲಾಗಿ ಆತನು ಅಬುಬಕರ ತಂದೆ ರಜಾಕಸಾಬ ಹಾಜಿ ಕೆಲಸ ಯಾಳಗಿ ಗ್ರಾಮದಲ್ಲಿ ಇದ್ದು ಪ್ರಭಾರಿಯಾಗಿ ನಾನು ಕೆಂಭಾವಿ ಗ್ರಾಮದಲ್ಲಿ ವಿ.ಎ. ಆಗಿ ಕೆಲಸ ಮಾಡುತ್ತೇನೆ ಎಂದು ತಿಳಿಸಿದನು. ಪಿಎಸಐ ಸತ್ಯನಾರಾಯಣ ಅವರು ಹೇಳಿದ ಮೇರೆಗೆ ಸಾಕ್ಷಿ ಹಣಮಂತ ಅಲ್ಲಿ ಬಿದ್ದಿದ್ದ ಹಣ ತೆಗೆದುಕೊಂಡು ಬಂದು ಎಸಿಬಿ ಕಛೇರಿಯಲ್ಲಿ ಬರೆದ ನೋಟಿನ ನಂಬರ ಹಾಗೂ ಮೌಲ್ಯಕೂ ಹಾಗೂ ಸದರಿ ಹಣ ತಾಳೆ ಮಾಡಿ ನೋಡಲಾಗಿ ಎರಡು ಒಂದೇ ಆಗಿದ್ದವು. 2,000/- 6 ನೋಟುಗಳನ್ನು ಖಾಖಿ ಕವರನಲ್ಲಿ ಹಾಕಿ ಸತ್ಯನಾರಾಯಣ ಸರ್ ಮತ್ತು ಸಾಕ್ಷಿದಾರರು ಸಹಿ ಮಾಡಿ ಪ್ಯಾಕ ಮಾಡಿ ಹೆಚ್.ಕೆ. ಎಂದು ಸೀಲ್ ಮಾಡಿ ಪಿಎಸಐ ರವರು ತಮ್ಮ ತಾಬಾಕ್ಕೆ ತೆಗೆದುಕೊಂಡರು. ಆಪಾದಿತನ ಅಲ್ಲಿ ಬಿದ್ದಿರುವ ಮೊಬೈಲನ್ನು ಹಣಮಂತ ಸಾಕ್ಷಿ ತೆಗೆದುಕೊಂಡು ಪಿಎಸಐ ಸತ್ಯನಾರಾಯಣ ಅವರಿಗೆ ಕೊಟ್ಟಿರುತ್ತಾರೆ. ಪಿಎಸಐ ಸತ್ಯನಾರಾಯಣ ಅವರು ಅದನ್ನು ಪ್ಯಾಕ ಮಾಡಿ ಸೀಲ್ ಮಾಡಿರುತ್ತಾರೆ. ಪಿಎಸಐ ಸತ್ಯನಾರಾಯಣ ಹಾಗೂ ಸಾಕ್ಷಿದಾರರು ಸಹಿ ಮಾಡಿದ ಚೀಟಿ ಅಂಟಿಸಿ ಆರ್ಟಿಕಲ್-7 ಎಂದು ಗುರುತಿಸಿರುತ್ತಾರೆ.

4. ಪಿಎಸಐ ಸತ್ಯನರಾಯಣ ರವರು ನನಗೆ ಮತ್ತು ನೆರಳು ಸಾಕ್ಷಿ ಲಕ್ಷ್ಮಣ ದಾಸರ ಅವರಿಗೆ ಸಿಫಾ ಕೂಲಡ್ರಿಕ್ಸ ಅಂಗಡಿಯಲ್ಲಿ ನಡೆದ ಘಟನೆಯ ಬಗ್ಗೆ ಕೇಳಿದರು. ನಾನು ಮೇಲೆ ನಡೆದ ಘಟನೆಯನ್ನು ವಿವರವಾಗಿ ಹೇಳಿರುತ್ತೇನೆ. ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಲು ಸೂಕ್ತ ಸ್ಥಳ ಇರದ ಕಾರಣಕ್ಕಾಗಿ 3-40 ಕ್ಕೆ ಹೊರಟು ಕೆಂಭಾವಿಯ ಯು.ಕೆ.ಪಿ. ಕ್ಯಾಂಪನಲ್ಲಿರುವ ವಿ.ಎ. ಕಛೇರಿಗೆ ಪೊಲೀಸ ಅಧಿಕಾರಿಗಳು, ನಾನು ಆಪಾಧಿತ ನೌಕರ 3-45 ಗಂಟೆಗೆ ಹೋಗಿ ತಲುಪಿದೇವು. ಕಛೇರಿಯ ಒಳಗಡೆ ಹೋದ ತಕ್ಷಣ ಸತ್ಯನಾರಾಯಣ ಪಿಎಸಐ ರವರು ವಾಹನದಲ್ಲಿರುವ ಸಾಮ್ಯಾಗ್ರಿಗಳನ್ನು ತರಲು ಪೊಲೀಸ ಪೇದೆಗಳಿಗೆ ಹೇಳಿದರು. ಗುತ್ತಪ್ಪಗೌಡ ಪೊಲೀಸ ಪೇದೆ ಅವರು ಜೀಪನಲ್ಲಿರುವ ಸಾಮ್ಯಾಗ್ರಿಗಳನ್ನು ತೆಗೆದುಕೊಂಡು ಆಫಿಸನಲ್ಲಿ ಬಂದು

ಪಿಎಸಐ ಸತ್ಯನಾರಾಯಣ ಅವರಿಗೆ ಕೊಟ್ಟರು. ಮುಂದಿನ ತನಿಖೆಗಾಗಿ ಪಿಎಸಐ ಸಾಹೇಬರು ಪೊಲೀಸ ಅಧಿಕಾರಿಗಳಿಗೆ ನೀರು ಮತ್ತು ಬಟ್ಟಲುಗಳನ್ನು ತೆಗೆದು ಮುತ್ತಣ್ಣಗೌಡ ಅವರಿಗೆ ಒಂದು ಬಟ್ಟಲಿನಲ್ಲಿ ನೀರನ್ನು ಹಾಕಿ ಸೋಡಿಯಂ ಕಾರ್ಬೋನೇಟ ದ್ರಾವಣ ತಯಾರಿಸಿ ಸದರಿ ದ್ರಾವಣವನ್ನು ಒಂದು ಬಾಟಲಿಯಲ್ಲಿ ಸ್ಯಾಂಪಲಗಾಗಿ ತೆಗೆದುಕೊಂಡರು ಅದಕ್ಕೆ ಪ್ಯಾಕ ಮಾಡಿ ಹೆಚ್.ಕೆ. ಎಂದು ಸೀಲ್ ಮಾಡಿ ಆರ್ಟಿಕಲ್-8 ಎಂದು ಗುರುತಿಸಲಾಯಿತು. ಆರ್ಟಿಕಲ್-7 ಮೋಬೈಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.7 ಎಂದು, ಸದರಿ ಬಾಟಲನ್ನು ಮು.ಮಾ.8 ಎಂದು ಗುರುತಿಸಲಾಯಿತು. ಸದರಿ ದ್ರಾವಣದಲ್ಲಿ ಆರೋಪಿತನ ಎಡಗೈ ಬೆರಳುಗಳನ್ನು ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಅದನ್ನು ಆರ್ಟಿಕಲ್ ನಂ.9 ಮತ್ತು 9(ಎ) ಎಂದು ಗುರುತಿಸಲಾಯಿತು. ಅವುಗಳನ್ನು ಮು.ಮಾ.9 ಮತ್ತು 10 ಎಂದು ಗುರುತಿಸಲಾಯಿತು. ಇನ್ನೊಂದು ಬಟ್ಟಲಿನಲ್ಲಿ ಆರೋಪಿತನ ಬಲಗೈ ಬೆರಳುಗಳನ್ನು ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಅದನ್ನು ಆರ್ಟಿಕಲ್ ನಂ.10 ಮತ್ತು 10(ಎ) ಎಂದು ಗುರುತಿಸಲಾಯಿತು. ಅವುಗಳನ್ನು ಮು.ಮಾ.11 ಮತ್ತು 12 ಎಂದು ಗುರುತಿಸಲಾಯಿತು. ಆರೋಪಿಗೆ ಮತ್ತೊಂದು ಪ್ಯಾಂಟ ವ್ಯವಸ್ಥೆ ಮಾಡಿ ಆತನ ಧರಿಸಿದ ಪ್ಯಾಂಟ ಪಡೆದುಕೊಂಡು ಅದರ ಎಡಗಡೆ ಕಿಸೆಯನ್ನು ದ್ರಾವಣದಲ್ಲಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಅದನ್ನು ಆರ್ಟಿಕಲ್ ನಂ.11 ಮತ್ತು 11(ಎ) ಎಂದು ಗುರುತಿಸಲಾಯಿತು. ಅವುಗಳನ್ನು ಮು.ಮಾ.13 ಮತ್ತು 14 ಎಂದು ಗುರುತಿಸಲಾಯಿತು. ಆರೋಪಿತ ಬಲಗಡೆ ಕಿಸೆಯನ್ನು ದ್ರಾವಣದಲ್ಲಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಅದನ್ನು ಆರ್ಟಿಕಲ್ ನಂ.12 ಮತ್ತು 12(ಎ) ಎಂದು ಗುರುತಿಸಲಾಯಿತು. ಅವುಗಳನ್ನು ಮು.ಮಾ.15 ಮತ್ತು 16 ಎಂದು ಗುರುತಿಸಲಾಯಿತು. ಪ್ಯಾಂಟನ್ನು ಆರ್ಟಿಕಲ್-13 ಎಂದು ಗುರುತಿಸಲಾಗಿದ್ದು ಅದನ್ನು ಮು.ಮಾ.17 ಎಂದು ಗುರುತಿಸಲಾಯಿತು.

5. ನನ್ನ ಕೆಲಸಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪಿಎಸಐ ಸತ್ಯ ನಾರಾಯಣ ರವರು ಆಪಾತನಿಗೆ ಫೈಲ ಎಲ್ಲಿದೆ ಎಂದು ಕೇಳಿದರು. ಆಪಾದಿತನು ತನ್ನ ಅಲಮಾರಾದಲ್ಲಿ ಇದೆ ಎಂದು ಹೇಳಿದನು. ಸದರಿ ಅಲಮಾರಿ ಕೀಲಿಯನ್ನು ಪಿಎಸಐ ತೆಗೆದುಕೊಂಡು ಅಲಮಾರಿ ಕೀಲಿ ತೆಗೆದು ನನಗೆ ಕೆಲಸಕ್ಕೆ ಸಂಬಂಧಪಟ್ಟ ಕಡತವನ್ನು ತೆಗೆದುಕೊಂಡು ಪರಿಶೀಲಿಸಿದರು. ಒಟ್ಟು 40 ಪುಟಗಳಿದ್ದು ಅದರಲ್ಲಿ ಅಕಾರ ಬಂದ, ಟಿಪ್ಪಣಿ, ಕೋರ್ಟ ಡಿಗ್ರಿ ಪ್ರತಿ, ತಹಶೀಲ ಕಛೇರಿಗೆ ಕೊಟ್ಟ ಅರ್ಜಿ ಎಲ್ಲವನ್ನು ಪಿಎಸಐ ರವರು ಪರಿಶೀಲಿಸಿದರು. ಉಪ-ತಹಶೀಲ್ದಾರ ರೇವಣ್ಣ ಅವರಿಗೆ ಸದರಿ ಕಡತವನ್ನು ತೋರಿಸಿ ದೃಡಪಡಿಸಿಕೂಂಡು ತಮ್ಮ ತಾಬೇಗೆ ತೆಗೆದುಕೊಂಡರು. ಸದರಿ ದಾಖಲೆಗಳನ್ನು (ಪುಟ ಸಂಖ್ಯೆ: 88 ರಿಂದ 131)ಗಳನ್ನು ನಿ.ಪಿ.31 ಎಂದು ಗುರುತಿಸಲಾಯಿತು. ಪಿಎಸಐ ಸತ್ಯನಾರಾಯಣ ರವರು 24-05-2018 ರಂದು ನಾನು ಆಪಾದಿನ ಜೊತೆ

ಮಾತನಾಡಿರುವ ಮೊಬೈಲನಲ್ಲಿ ರಿಕಾರ್ಡ ಆಗಿರುವ ಮೆಮೋರಿ ಕಾರ್ಡನ್ನು ವಿಜಯಕುಮಾರ ಪೊಲೀಸ ಅವರ ಕಡೆಯಿಂದ ಲ್ಯಾಪಟಾಪಗೆ ವರ್ಗಾಯಿಸಿ ಅದನ್ನು ಸಿ.ಡಿ. ಮಾಡಿರುತ್ತಾರೆ. ಸದರಿ ಮೇಮೋರಿ ಕಾರ್ಡನ್ನು ಕವರನಲ್ಲಿ ಹಾಕಿ ಆರ್ಟಿಕಲ್ ನಂ.14, ಸಿ.ಡಿ.ಯನ್ನು ಕವರನಲ್ಲಿ ಹಾಕಿ ಆರ್ಟಿಕಲ್ ನಂ.14(ಎ) ಎಂದು ಗುರುತಿಸಿದ್ದು ಅದನ್ನು ಮು.ಮಾ.18 ಮತ್ತು 19 ಎಂದು ಗುರುತಿಸಲಾಯಿತು. ಆ ವೇಳೆಗೆ ಯಶ್ವಂತ ಬಿಸನಳ್ಳಿ ಅವರು ಫೋಟೊ ಗ್ರಾಫಿ ಮಾಡಿರುತ್ತಾರೆ ವಿಜಯಕುಮಾರ ಅವರು ಲ್ಯಾಪಟಾಪನಲ್ಲಿ ಬೆರಳಚ್ಚು ಮಾಡಿರುತ್ತಾರೆ. ಆರೋಪಿಗೆ ಸ್ವರಕ್ಷಣ ಹೇಳಿಕೆ ಕೊಡುವಂತೆ ಕೇಳಿದಾಗ ಆತ ಒತ್ತಾಯ ಪೂರ್ವಕವಾಗಿ ಫಿರ್ಯಾದಿ ಹಣವನ್ನು ತನ್ನ ಕಿಸೆಯಲ್ಲಿ ಇಟ್ಟಿರುತ್ತಾನೆ ಎಂದು ಬರೆದುಕೊಟ್ಟಿರುತ್ತಾನೆ. ಅದರ ಬಗ್ಗೆ ನಾನು ಮತ್ತು ಲಕ್ಷ್ಮಣ ಆರೋಪಿ ಹೇಳಿರುವದು ಸುಳ್ಳು ಎಂದು ಹೇಳಿದೆವು. ಸದರಿ ಸ್ವರಕ್ಷಣ ಹೇಳಿಕೆಯನ್ನು ನಿ.ಪಿ.32 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಪೊಲೀಸರು ಕಚ್ಚಾ ನಕ್ಷೆ ತಯಾರಿಸಿರುತ್ತಾರೆ. ದಿಃ 25.05.2018 ರಂದು ಮಧ್ಯಾಹ್ನ 3-45 ರಿಂದ ರಾತ್ರಿ 8-00 ಗಂಟೆಯ ವರೆಗೆ ಕಂದಾಯ ನಿರೀಕ್ಷಕರ ಕಛೇರಿಯಲ್ಲಿ ಪಂಚನಾಮೆಯನ್ನು ಮಾಡಿದರು ಸದರಿ ಪಂಚನಾಮೆಯನ್ನು ನಿ.ಪಿ.33 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.33(ಎ) ಎಂದು ಗುರತಿಸಲಾಯಿತು. ದಿಃ 24-05-2018 ರಂದು ನಾನು ತಲಾಟಿಯ ಜೊತೆ ಮೊಬೈಲನಲ್ಲಿ ಮಾತನಾಡಿದ ರಿಕಾರ್ಡನ್ನು ಮುಂದಿನ ತನಿಖೆಗಾಗಿ ಬೇಕು ಎಂದು ಪಿಎಸಐ ರವರು ಹೇಳಿದ್ದು ಮೊಬೈಲನಲ್ಲಿ ರಿಕಾರ್ಡ ಮಾಡಿಕೊಂಡು ಕೊಡಬೇಕು ಎಂದು ಹೇಳಿದರು. ಆ ಧ್ವನಿಯನ್ನು ಗುರುತಿಸುವ ಸಲುವಾಗಿ ದಿಃ 25.05.2018 ರಂದು ಪಿಎಸಐ ರವರು ಆರೋಪಿಯ ಧ್ವನಿ ಗುರುತಿಸುವ ಸಲುವಾಗಿ ಉಪ-ತಹಶೀಲ್ದಾರ ರೇವಣ್ಣ ಅವರನ್ನು ಕರೆಸಿದರು. ಅವರಿಗೆ ಆ ಧನಿಯನ್ನು ಕೇಳಿಸಿದರು ಅವರು ಆಪಾಧಿನ ಧ್ವನಿ ಎಂದು ಗುರುತಿಸಿದರು. ಆ ಸಮಯದಲ್ಲಿ ತೋಟಪ್ಪ ಅವರಿಗೆ ನನ್ನ ಧ್ವನಿ ಗುರುತಿಸುವಂತೆ ಕೇಳಿದರು. ಆ ಧ್ವನಿ ಸುರುಳಿ ಚಾಲು ಮಾಡಿಸಿ ಕೇಳಿಸಿದರು. ತೋಟಪ್ಪ ಅವರು ನನ್ನ ಧ್ವನಿ ಗುರುತಿಸಿದರು. ಸದರಿ ಧ್ವನಿಯನ್ನು ಸಿ.ಡಿ. ಮಾಡಿ ಜಪ್ತಿ ಮಾಡಿಕೊಂಡರು ಅದನ್ನು ಆರ್ಟಿಕಲ್-15 ಮತ್ತು 16 ಎಂದು ಗುರುತಿಸಿರುತ್ತಾರೆ. ಅವುಗಳನ್ನು ಮು.ಮಾ.20 ಮತ್ತು 21 ಎಂದು ಗುರುತಿಸಲಾಯಿತು. ಆರ್.ಐ. ಕಛೇರಿಯಲ್ಲಿ ಎಲ್ಲ ಪ್ರಕ್ರಿಯೇ ಮಾಡಿದರು. ದಿಃ 25.05.2018 ರಂದು ಮಧ್ಯಾಹ್ನ 3-00 ರಿಂದ 10-00 ಗಂಟೆಯವರೆಗೆ ಪಂಚನಾಮೆ ಮಾಡಿದರು. ಸದರಿ ಪಂಚನಾಮೆಯನ್ನು ನಿ.ಪಿ.34 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.34(ಎ) ಎಂದು ಗುರುತಿಸಲಾಯಿತು. ನನ್ನ ಮತ್ತು ಆರೋಪಿಯ ಧ್ವನಿಯನ್ನು ಹಾಳೆಗಳಲ್ಲಿ ಬರೆದಿದ್ದು ಅವುಗಳನ್ನು ಮು.ಮಾ.35 ಮತ್ತು 36 ಎಂದು ಗುರುತಿಸಲಾಯಿತು. ಈ ಎಲ್ಲ ವಿಷಯದ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

ಪಾಟೀ ಸವಾಲು ಆರೋಪಿತನ ಪರವಾಗಿ ಶ್ರೀ. ಸಿ.ಎಸ್.ಎಮ್. ವಕೀಲರಿಂದ

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.